3. ಈ ಎರಡು ಕಾಮಗಾರಿಗಳಿಗೆ ಮಂಜೂರಾಗಿರುವ ಹಣ ಎಷ್ಟು; ಕಾಮಗಾರಿಗಳವಾರು ವಿವರ ನೀಡುವುದು;

4. ಈ ಕಾಮಗಾರಿಗಳಿಗೆ ಖರ್ಚಾಗಿರುವ ಹಣಕ್ಕೆ ತಕ್ಕ ಕೆಲಸ ಆಗಿದೆಯೇ; ಒಂದು ವೇಳೆ ಹಣ ಖರ್ಚಾಗಿರುವಂತೆ ಕೆಲಸವಾಗಿಲ್ಲವೆಂದರೆ ಕೈಗೊಂಡಿರುವ ಕ್ರಮಗಳು ಏನು;

5. ಈ ಎರಡು ಕಾಮಗಾರಿಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು):–

1. ಹೌದು.

ಈ ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ 1992ರ ಮಾರ್ಚಿ ತಿಂಗಳಲ್ಲಿ ನೀಡಲಾಗಿರುವುದರಿಂದ ಎರಡು ವರ್ಷಗಳು ಕಳೆದಿರುವುದಿಲ್ಲ.

2. ಕೆಲಸಗಳನ್ನು ಮುಗಿಸುವ ದಿನಾಂಕ ಜೂನ್ 1993 ಆಗಿರುವುದರಿಂದ ವಿಳಂಬವಾಗಿರುವುದಿಲ್ಲ.

3. 1. ಭೀಮನಹಳ್ಳಿ – ಯಾಗಾಪೂರ ವಾಯ ಬೆಳಗೇರ ರಸ್ತೆ
= ರೂ. 26.65 ಲಕ್ಷಗಳು
2. ದಂಡಗುಂಡ – ಸಂಕನೂರ ರಸ್ತೆ
= ರೂ. 3.40 ಲಕ್ಷಗಳು

4. ಖರ್ಚಿಗೆ ತಕ್ಕಂತೆ ಕೆಲಸ ಆಗಿರುತ್ತದೆ.

5. ಈ ಎರಡು ಕೆಲಸಗಳನ್ನು ಜೂನ್ 1993ರ ಅಂತ್ಯದವರೆಗೆ ಪೂರ್ಣಗೊಳಿಸಲಾಗುವುದು.

ಸೇಡಂ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ

(2056): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರಕ್ಕೆ 25–30 ಸಾವಿರ ಜನಸಂಖ್ಯೆ ಇದ್ದು ಕಂದಾಯ ಉಪವಿಭಾಗ ಕೇಂದ್ರವಾಗಿ, ಸುತ್ತಲೂ ಬೃಹತ್ ಸಿಮೆಂಟ್ ಕಾರ್ಖಾನೆಗಳು ಇದ್ದು ಈ ವರ್ಷ ಅನಾವೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಈ ನಗರಕ್ಕೆ ಈ ವರ್ಷದ ಅನಾವೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯುಂಟಾಗಿದೆ ಎಂದು ನಾನು ಸಂಬಂಧಪಟ್ಟ ಸಚಿವರಿಗೆ ಮಾಹಿತಿ ನೀಡಿದ್ದರೂ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮವೇನು;

ಇ. ಇಂತಹ ದೊಡ್ಡ ಜನಸಂಖ್ಯೆ ಇರುವ ನಗರಕ್ಕೆ ಅನಾವೃಷ್ಟಿಯ ಶೀರ್ಷಿಕೆ ಹಣದಿಂದ ಈ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಬಹುದೇ; ಹಾಗೂ ನಿವಾರಿಸುವುದು ಯಾವಾಗ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹೌದು.

ಆ. ಸೇಡಂ ಪಟ್ಟಣದಲ್ಲಿ ಬರ ಪರಿಹಾರ ಯೋಜನೆ ಅಡಿಯಲ್ಲಿ ಈಗಾಗಲೇ 6ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಅವುಗಳ ಪೈಕಿ 4 ಕೊಳವೆ ಬಾವಿಗಳಲ್ಲಿ ನೀರಿನ ಉತ್ಪತ್ತಿ ಅಧಿಕವಾಗಿರುವುದರಿಂದ ಅವುಗಳಿಗೆ ಪವರ್ ಪಂಪ್‌ಗಳನ್ನು ಅಳವಡಿಸಲಾಗುತ್ತಿದೆ. ಮತ್ತು 2 ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಕೂಡಿಸಲಾಗಿದೆ. ಅಲ್ಲದೆ, ಪಟ್ಟಣದಲ್ಲಿ ಹಾಲಿ ಇರುವ ಎಲ್ಲಾ ಕೊಳವೆ ಬಾವಿಗಳನ್ನು ಸುಸ್ಥಿತಿಯಲ್ಲಿಡಲು ಪುರಸಭೆಯವರು ಸೂಕ್ತ ಕ್ರಮ ತೆಗೆದುಕೊಂಡಿರುತ್ತಾರೆ.

ಇ. ಸೇಡಂ ಪಟ್ಟಣಕ್ಕೆ ಕುಡಿಯುವ ನೀರಿನ ಶಾಶ್ವತ ಪರಿಹಾರ ಕಾಮಗಾರಿಗಾಗಿ ರೂ. 99.00 ಲಕ್ಷ ಮೊತ್ತಕ್ಕಾಗಿ ಸರ್ಕಾರವು ಈಗಾಗಲೇ ಮಂಜೂರಾತಿಯನ್ನು ನೀಡಿದೆ. ಆದರೆ, ಪರಿಷ್ಕೃತ ಅಂದಾಜು ವೆಚ್ಚದ ಪಟ್ಟಿ ರೂ. 160.00 ಲಕ್ಷ ಮೊತ್ತಕ್ಕಾಗಿ ಈಗಾಗಲೇ ಮಂಡಳಿಗೆ ಸಲ್ಲಿಸಲಾಗಿದೆ. ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಿರ್ವಹಿಸುತ್ತಲಿದ್ದು, ಕಾಮಗಾರಿ ವಿವಿಧ ಪ್ರಗತಿ ಹಂತದಲ್ಲಿದೆ. ಇಲ್ಲಿಯವರೆಗೆ ಈ ಕಾಮಗಾರಿಗಾಗಿ ಒಟ್ಟು ರೂ. 93.35 ಲಕ್ಷ ಖರ್ಚು ಮಾಡಲಾಗಿದೆ. ಇದನ್ನು ಡಿಸೆಂಬರ್ 1993ರೊಳಗಾಗಿ ಪೂರ್ತಿಗೊಳಿಸಲಾಗುವುದು. ಈ ಶಾಶ್ವತ ಪರಿಹಾರ ಕಾಮಗಾರಿಯು ಮುಗಿಯುವ ಮುನ್ನ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಅಭಾವ ಪರಿಹಾರ ಶೀರ್ಷಿಕೆಯಡಿಯಲ್ಲಿ ಬಿಡುಗಡೆಯಾದ ಹಣದಿಂದ ನಿವಾರಿಸಲಾಗುವುದು.

1987ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರರ ಹುದ್ದೆಗೆ ಸಂದರ್ಶನ

(1900): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1987ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರರ ಹುದ್ದೆಗೆ ಸಂದರ್ಶನ ತೆಗೆದುಕೊಂಡು ಆಯ್ಕೆ ಮಾಡಲಾಗಿರುವ ತೋಟಗಾರರ ಸಂಖ್ಯೆ ಎಷ್ಟು;

ಆ. ಈ ಪೈಕಿ ಈಗಾಗಲೇ ನೌಕರಿಯನ್ನು ಕೊಡಲಾಗಿರುವವರ ಸಂಖ್ಯೆ ಎಷ್ಟು;

ಇ. ಉಳಿದವರಿಗೆ ಯಾವಾಗ ನೌಕರಿಯನ್ನು ಕೊಡಲಾಗುವುದು.

ಈ. ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರೂ ಸಹ ಇದುವರೆವಿಗೆ ಅವರಿಗೆ ನೌಕರಿಯನ್ನು ಕೊಡಲಾಗಿಲ್ಲವೆಂಬ ಸಂಗತಿ ನಿಜವೆ;

ಉ. ಹಾಗಿದ್ದಲ್ಲಿ ಅವರಿಗೆ ಆದಷ್ಟು ಬೇಗನೆ ನೌಕರಿ ಕೊಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):–

ಅ. 182

ಆ. 83

ಇ. ನೇರ ನೇಮಕಾತಿಯ ಮೇಲೆ ಸರ್ಕಾರದ ಆರ್ಥಿಕ ಮಿತವ್ಯಯದ ನಿರ್ಬಂಧವಿದೆ. ಆರ್ಥಿಕ ಇಲಾಖೆ ನಿರ್ಬಂಧ ತೆಗೆದಾಗ ತೋಟಗಾರರ ಹುದ್ದೆಗಳು ಖಾಲಿ ಇದ್ದಲ್ಲಿ ಭರ್ತಿ ಮಾಡಲಾಗುವುದು.